**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 1274 /2018**

**ಪ್ರಾಸಾಃ- 11 ಚಾಸಾಃ- 25**

| | | |
|---|---|---|
| ಸಾಕ್ಷಿಯ ಹೆಸರು | : | ನಾಗರಾಜ್.ಆರ್ |
| ತಂದೆಯ ಹೆಸರು | : | ರಂಗಪ್ಪ.ಸಿ |
| ವಯಸ್ಸು | : | 46 ವರ್ಷ |
| ವೃತ್ತಿ | : | ಸಿ ಪಿ ಐ, ಮೊಳಕಾಲ್ಮೂರು ವೃತ್ತ |
| ವಾಸಸ್ಥಳ | : | ಮೊಳಕಾಲ್ಮೂರು |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 25.10.2025**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನಾನು ಡಿಸೆಂಬರ್ 2017 ರಿಂದ ಜುಲೈ 2019 ರವರೆಗೆ ಗಾಂದಿ ನಗರ ಪೋಲೀಸ್ ಠಾಣೆಯಲ್ಲಿ ಪಿ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 6-1-2018 ರಂದು ರಾತ್ರಿ 9-10 ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಚಾಸಾ 1 ಠಾಣೆಗೆ ರಾಜರಾಗಿ ನಿಪಿ-2 ರಂತೆ ನೀಡಿದ ದೂರನ್ನು ಪಡೆದುಕೊಂಡು ನಮ್ಮ ಠಾಣಾ ಮೊಕದ್ದಮೆ ಸಂಖ್ಯೆಃ 1-2018 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಮೂಲ ಎಫ್ ಐ ಆರ್ ನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿದ್ದೆ. ನಿಪಿ-2 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು, ಎಫ್ ಐ ಆರ್ ನ್ನು ನಿಪಿ-8 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ನಂತರ ಕೇಸಿನ ಮುಂದಿನ ತನಿಖೆಯನ್ನು ಚಾಸಾ 26 ರವರಿಗೆ ವಹಿಸಿಕೊಟ್ಟಿದ್ದೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ ಎಂ ಜಿ ವಕೀಲರಿಂದಃ**

ಚಾಸಾ 1 ರವರು ನೀಡಿದ ನಿಪಿ-2 ರ ಮಾಹಿತಿ ಸುಳ್ಳು ಎಂದು ಗೊತ್ತಿದ್ದರೂ ಸಹ ಚಾಸಾ 1 ರವರು ಪೋಲೀಸ್ ಸಿಬ್ಬಂದಿ ಆಗಿದ್ದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿಕೊಂಡಿದ್ದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**